

## ವಿನಯಾ ಮತ್ತು ಮೌನಕ್ರಾಂತಿ...

'ಆರತಿಗೊಬ್ಬ ಮಗಳು' ಎನ್ನುವುದು ಹಳೆಯ ಮಾತು. ಈ ಮಾತು ಹಳೆಯದಾದರೂ, ಹೆಣ್ಣು ದೀಪಧಾರಿ ಎನ್ನುವುದು ಇಂದಿಗೂ ಸತ್ಯ ಎನ್ನುತ್ತಾರೆ ಕೆ.ಸಿ.ಎನ್.ವೇಣುಗೋಪಾಲ್. ಆ ಸತ್ಯವನ್ನು ನಂಬಿಯೇ ಅವರು 'ಅಧಿಕಾರ' ಚಿತ್ರ ನಿರ್ಮಿಸುತ್ತಿದ್ದಾರೆ. ದೀಪಧಾರಿಯಾದ ಹೆಣ್ಣು ಕುಟುಂಬವನ್ನು ಬೆಳಗಿಸುತ್ತಾಳೆ, ಬೆಳೆಸುತ್ತಾಳೆ. ಇದು ಸದ್ದಿಲ್ಲದೆ ನಡೆಯುವ ಮೌನಕ್ರಾಂತಿ– ಎನ್ನುವುದು ಅವರ ಚಿತ್ರದ ಕಥೆ.

ಮೌಲ್ಯಗಳನ್ನು ಸಾರುವ ಮಾದರಿ ಹೆಣ್ಣಿನ ಪಾತ್ರಗಳಲ್ಲಿ ಸಾಕಷ್ಟು ನಟಿಸಿರುವ ವಿನಯಾಪ್ರಕಾಶ್ 'ಅಧಿಕಾರ' ಚಿತ್ರದ ಕೇಂದ್ರ ಪಾತ್ರ. ಅವರಿಗೆ ಈ ಪಾತ್ರ ಸಿಕ್ಕಾಪಟ್ಟೆ ಖುಷಿ ಕೊಟ್ಟಿದೆಯಂತೆ. ಚಿತ್ರದ ಗೀತೆಯೊಂದರ ಚಿತ್ರೀಕರಣ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ವಿನಯಾ, ತುಂಬಾ ದಿನಗಳ ನಂತರ ಒಳ್ಳೆಯ ಪಾತ್ರವೊಂದು ದೊರೆತ ಸಡಗರದಲ್ಲಿದ್ದರು. 'ಕಥೆ ಕೊಂಚ ಹಳೆಯದೆನ್ನಿಸಲಿಲ್ಲವಾ?' ಎನ್ನುವ ಪ್ರಶ್ನೆಯನ್ನವರು ವಿನಯದಿಂದಲೇ ತಳ್ಳಿಹಾಕಿದರು. 'ಇದು ಈ ಕಾಲಕ್ಕೂ ಪ್ರಸ್ತುತವಾದ ಕಥೆ. ಒಂದೇ ರೀತಿಯ ಕಥನದ ಸಿನಿಮಾಗಳು ರೂಪುಗೊಳ್ಳುತ್ತಿರುವ ಸಂದರ್ಭದಲ್ಲಿ ನಮ್ಮ ಚಿತ್ರ ಪ್ರೇಕ್ಷಕರಿಗೆ ಹೊಸತಾಗಿ ಕಾಣಿಸುತ್ತದೆ' ಎನ್ನುವ ನಿರೀಕ್ಷೆಯ ಬೆಳಕು ಅವರ ಮಾತುಗಳಲ್ಲಿತ್ತು.

ರಾಮನಾಥ್ ಋಗ್ವೇದಿ 'ಅಧಿಕಾರ' ಚಿತ್ರದ ನಿರ್ದೇಶಕರು. 'ಬಿಸಿಬಿಸಿ', 'ಬುದ್ಧಿವಂತ', 'ಆಡು ಆಟ ಆಡು' ರೀತಿಯ ಚಿತ್ರಗಳನ್ನು ನಿರ್ದೇಶಿಸಿದ್ದ ಋಗ್ವೇದಿ ಈಗ ಸ್ತ್ರೀಕಥನವೊಂದಕ್ಕೆ ಕೈ ಹಾಕಿದ್ದಾರೆ. ಬೆಳಗಾವಿ ಪರಿಸರದಲ್ಲಿ ಚಿತ್ರದ ಬಹುತೇಕ ದೃಶ್ಯಗಳನ್ನು ಅವರೀಗಾಗಲೇ ಚಿತ್ರೀಕರಿಸಿದ್ದಾರಂತೆ. ಈ ಚಿತ್ರದ ಮತ್ತೊಂದು ಆಕರ್ಷಣೆ ನೃತ್ಯಗಾರ್ತಿ ಸುಧಾಚಂದ್ರನ್.

## 'ಪರಮಾತ್ಮ'ನ ಪರಿಷ್ಕಾರ

'ಲೈಫು ಇಷ್ಟೇನಾ' ಚಿತ್ರದ ಕ್ಲೈಮ್ಯಾಕ್ಸ್ ಅನ್ನು ನಿರ್ದೇಶಕ ಪವನ್ ವಿಸ್ತರಿಸಿದ್ದು ಹಳೆಯ ಸುದ್ದಿ. ಈಗ ಪವನ್ ಅವರ 'ಮಾನಸಗುರು' ಯೋಗರಾಜಭಟ್ ಸಿನಿಮಾದ ಸರದಿ. 'ಪರಮಾತ್ಮ' ಚಿತ್ರದ ಅಂತ್ಯದ ಕೆಲವು ಭಾಗಗಳನ್ನು ಟ್ರಿಮ್ ಗೊಳಿಸಲಾಗಿದೆಯಂತೆ.

'ಪರಮಾತ್ಮ' ಚಿತ್ರದ ಕ್ಲೈಮ್ಯಾಕ್ಸ್ ಕೊಂಚ ಹೆಚ್ಚಾಯಿತು ಎನ್ನುವ ಕೆಲವು ಪ್ರೇಕ್ಷಕರ ಅನಿಸಿಕೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಚಿತ್ರತಂಡ ಕತ್ತರಿ ಪ್ರಯೋಗ ನಡೆಸಿದೆ. ಈ ಪರಿಷ್ಕಾರದ ನಂತರ ಚಿತ್ರ ಇನ್ನಷ್ಟು ಸುಂದರವಾಗಿದೆಯಂತೆ. ಅಂದಹಾಗೆ, 'ಭಿನ್ನ ಅನಿಸಿಕೆಗಳ ನಡುವೆಯೂ 'ಪರಮಾತ್ಮ'ನ ಗಲ್ಲಾಪೆಟ್ಟಿಗೆ ರಿಪೋರ್ಟ್ ಚೆನ್ನಾಗಿದೆ. ಎಲ್ಲರಿಗೂ ಧನ್ಯವಾದ' ಎನ್ನುತ್ತಿದ್ದಾರೆ ಭಟ್ಟರು.






## ರಮ್ಯಾಗೆ ಗೇಟ್‌ಪಾಸಿಲ್ಲ!

'ನೈಂಟಿ' ಚಿತ್ರದ ಮೂಲಕ ಹೂಡಿದ ಬಂಡವಾಳದ ಎರಡು ಮೂರು ಪಟ್ಟು ಲಾಭ ಮಾಡಿರುವ ಸಾಧು ಕೋಕಿಲ ಅವರಿಗೆ, ಆ ಗೆಲುವಿನ ನಶೆ 'ಅನಾರ್ಕಲಿ' ಮೂಲಕ ಕೊಂಚ ಕಡಿಮೆಯಾಗುತ್ತಿರುವಂತಿದೆ. ಯಾಕೋ ಅವರು ಅಂದುಕೊಂಡಂತೆ ಎಲ್ಲವೂ ಸುಲಲಿತವಾಗಿ ನಡೆಯುತ್ತಿಲ್ಲ. ಚಿತ್ರದ ಮುಹೂರ್ತದ ಸಂದರ್ಭದಲ್ಲಿ ದಿಗಂತ್ ಅವರನ್ನು ನಾಯಕನ ಪಾತ್ರದಲ್ಲಿ ಬಿಂಬಿಸಲಾಗಿತ್ತು. ಆದರೆ, ಅವರು ಕೈಗೆ ಸಿಗುವುದು ಕಷ್ಟವಾದುದರಿಂದ ಆ ಜಾಗದಲ್ಲಿ ಶ್ರೀನಗರ ಕಿಟ್ಟಿಯನ್ನು ಕೂರಿಸಲಾಯಿತು. ಚಂದ್ರು ನಿರ್ದೇಶನದ 'ಕೋ ಕೋ' ಮುಗಿಸಿರುವ ಕಿಟ್ಟಿ ಇದೀಗ 'ಸಾಧು ಸಹವಾಸ'ಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ.

'ಅನಾರ್ಕಲಿ'ಗೆ ಸಂಬಂಧಿಸಿದ ಹೊಸ ವದಂತಿ, ಚಿತ್ರದ ಮುಖ್ಯಪಾತ್ರವೊಂದರಲ್ಲಿ ನಟಿಸುತ್ತಿದ್ದ ರಮ್ಯಾ ಬಾರ್ನ ಅವರಿಗೆ ಬಾಗಿಲು ತೋರಿಸಲಾಗಿದೆ ಎನ್ನುವುದು. ಈ ವದಂತಿ ತಳ್ಳಿಹಾಕಿರುವ ಸಾಧು– 'ಇಂಥ ಸುದ್ದಿಗಳು ಹೇಗೆ ಹುಟ್ಟಿಕೊಳ್ಳುತ್ತವೋ ಗೊತ್ತಿಲ್ಲ. ರಮ್ಯಾ ಬಾರ್ನ ಅವರನ್ನು ನನ್ನ ಚಿತ್ರದಿಂದ ಕೈಬಿಟ್ಟಿರುವ ಸುದ್ದಿ ಸುಳ್ಳು. ಪ್ರಜ್ಞಾ ಅವರೊಂದಿಗೆ ರಮ್ಯಾ ಕೂಡ ಮುಖ್ಯ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ' ಎಂದು ಸ್ಪಷ್ಟನೆ ನೀಡಿದ್ದಾರೆ.

ಅಂದಹಾಗೆ, ಸಾಧು ಇತ್ತೀಚೆಗಷ್ಟೇ 'ಆಟ' ಎನ್ನುವ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ನಿರ್ಮಾಪಕ ಶೈಲೇಂದ್ರಬಾಬು ಅವರು ತಮ್ಮ ಪುತ್ರ ಸುಮಂತ್‌ಗಾಗಿ ನಿರ್ಮಿಸುತ್ತಿರುವ ಈ ಚಿತ್ರದ ಸಂಗೀತದ ಬಗ್ಗೆ ಸಾಧುಗೆ ನಿರೀಕ್ಷೆಗಳಿವೆ. 'ನನ್ನನ್ನು ನಾನು ಸಂಪೂರ್ಣವಾಗಿ ತೊಡಗಿಸಿಕೊಂಡು ಸಂಗೀತ ನೀಡಿರುವ ಚಿತ್ರವಿದು' ಎನ್ನುತ್ತಾರೆ ಸಾಧು.

■ ರಘು